ದಿ: ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಮುಖ್ಯವಿಚಾರಣೆಃ ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರಿಂದ (ಶ್ರೀಮತಿ ಸಿ.ಪಿ.ಎ.)**:

1. ದಿಃ 29-05-2013 ರಂದು ಆರೋಪಿ ಹೊಂದಿದ ಎಸ್.ವಿ. ಖಾತೆ 10670101003527 ಮತ್ತು ಬಂಗಾರದ ಸಾಲಾ ಖಾತಾ ನಂಬರ 67015301013713 ಇವುಗಳ ವಿವರವನ್ನು ಪ್ರಗತಿ ಗ್ರಾಮೀಣ ಬ್ಯಾಂಕ್ ಜಗಳೂರುರವರು ನೀಡಿರುತ್ತಾರೆ.

2. ದಿಃ 31-05-2013 ರಂದು ಪವನ್ ಗ್ಯಾಸ್ ಡಿಸ್ಟ್ರಿಬ್ಯೂಟರ್ಸ್ ಜಗಳೂರು ಆರೋಪಿಯು ಹೊಂದಿದ ಅಡುಗೆ ಅನಿಲ ದಾಖಲೆ ಸಂಖ್ಯೆ 656 ಅದರ ಮಾಹಿತಿಯನ್ನು ನೀಡಿರುತ್ತಾರೆ. ಅದನ್ನು ಪ್ರಕರಣಕ್ಕೆ ಅಳವಡಿಸಿಕೊಂಡಿರುತ್ತೇನೆ. ದಿಃ 01-06-2013 ರಂದು ಆರೋಪಿ ಹೊಂದಿದ ಪ್ರಗತಿ ಗ್ರಾಮೀಣ ಬ್ಯಾಂಕ್ ಜಗಳೂರು ಬಂಗಾರವನ್ನು ಅಡಮಾನ ಇಟ್ಟಂತಹ ಅದರ ಬಾಬ್ತು ಪಂಚನಾಮ ಕ್ರಮ ಜರುಗಿಸಿರುತ್ತೇನೆ. ಸದರಿ ಮಹಜರನ್ನು ಮಧ್ಯಾಹ್ನ 12.30 ರಿಂದ 1.00 ಗಂಟೆಯವರೆಗೆ ಮಾಡಿರುತ್ತೇನೆ. ಮೌಲ್ಯಮಾಪಕರಾದ ಕೆ. ಎನ್. ಗಣಪತಿ ಹಾಗುರಾ ಬ್ಯಾಂಕ್ ವ್ಯವಸ್ಥಾಪಕರಾದ ನಾಗರಾಜ ಮತ್ತು ಜೆ. ಈರಾಚಾರ್ಯರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ. ದಿಃ 04-06-2013 ರಂದು ಕಾರ್ಯ ನಿರ್ವಾಹಕ ಅಧಿಕಾರಿ ತಾಲ್ಲೂಕು ಪಂಚಾಯತಿ ದಾವಣಗೆರೆ ಇವರು ಆರೋಪಿಗೆ ಸಂಬಂಧಿಸಿದ ಸೇವಾ ಪುಸ್ತಕವನ್ನು ಹಾಜರುಪಡಿಸಿದ್ದು, ಅದನ್ನು ಪ್ರಕರಣಕ್ಕೆ ಅಳವಡಿಸಿಕೊಂಡಿರುತ್ತೇನೆ. ದಿಃ 06-06-2013 ರಂದು ಉಪನೊಂದಣಿ ಅಧಿಕಾರಿ ಜಗಳೂರು ಇವರು ಆರೋಪಿಯ ನಿವೇಶನದ ನೊಂದಣಿ ಮತ್ತು ಮುದ್ರಣದ ಶುಲ್ಕದ ಮಾಹಿತಿಯನ್ನು ನೀಡಿದರು. ಅದನ್ನು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಆರೋಪಿಯ ಪತ್ನಿ ರೇಣುಕಾಂಬರವರು ಶ್ರೀಮತಿ ಮೀನಾಕ್ಷಿ ಕೋಂ ರೇವಣಸಿದ್ದಪ್ಪ ಇವರ ಪರವಾಗಿ ಜಿ.ಪಿ.ಎ. ಶಾಂತ ಕುಮಾರರವರಿಂದ ಜಗಳೂರು ಬಡಾವಣೆಯ ನಿವೇಶನ ನಂಬರ 71 ರ ನೋಂದಣಿ ಮತ್ತು ನೋಂದಣಿ ಶುಲ್ಕದ ಮಾಹಿತಿಯನ್ನು ನೀಡಿದ್ದು ಅದನ್ನು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಆರೋಪಿಯು ಭರಮಸಮುದ್ರ ಸರ್ವೆ ನಂಬರ 8/3 ರಲ್ಲಿ 3 ಎಕರೆ 18 ಗುಂಟೆ ಜಮೀನನ್ನು ದಿಃ 17-06-

2011 ರಂದು ಎಂ.ಬಿ. ಜಗದೀಶರವರಿಂದ ಖರೀದಿಸಿದ್ದು, ಅದರ ನೊಂದಣಿ ಶುಲ್ಕ ಮತ್ತು ಖರೀದಿ ಶುಲ್ಕದ ಮಾಹಿತಿಯನ್ನು ನೀಡಿದ್ದು ಅದನ್ನು ಸ್ವೀಕರಿಸಿ ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ದಿಃ 14-06-2013 ರಂದು ಶಾಖಾ ವ್ಯವಸ್ಥಾಪಕರು ರೆಡ್ಡಿ ಸಹಕಾರಿ ಬ್ಯಾಂಕ್ ಚಿತ್ರದುರ್ಗರವರು ಆರೋಪಿಯ ಪತ್ನಿ ಹೊಂದಿದ ಸಾಲದ ಖಾತೆಯ ವಿವರವನ್ನು ನೀಡಿದ್ದು, ಅದನ್ನು ಸ್ವೀಕರಿಸಿ ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ದಿಃ 20-06-2013 ರಂದು ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ ಜಗಳೂರು ಇವರು ಆರೋಪಿಯ ಮನೆಯ ವಿಧ್ಯುತ್ ಠೇವಣಿ ಬಗ್ಗೆ ಮಾಹಿತಿಯನ್ನು ನೀಡಿದ್ದು, ಅದನ್ನು ಸ್ವೀಕರಿಸಿ ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ.

3. ದಿಃ 21-06-2013 ರಂದು ಆರೋಪಿಯ ಎಸ್.ಬಿ. ಖಾತೆ ನಂಬರ 5343 ಖಾತಾ ನಕಲನ್ನು ಪ್ರಗತಿ ಗ್ರಾಮೀಣ ಬ್ಯಾಂಕ್ ಬಿದುರುಕರೆ ವಿವರಣೆಯನ್ನು ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡಿದ್ದೇನೆ. ಅದೇ ದಿನ ಆರೋಪಿಯ ವಾಹನ ಸಂಖ್ಯೆ ಕೆ.ಎ. 17 ಇ.ಡಿ. 9073 ನೇದರ ಆರ್.ಟಿ.ಓ. ದಾವಣಗೆರೆಯವರಿಂದ ಮಾಹಿತಿಯನ್ನು ಮತ್ತು ಅಂದಾಜು ನಿರ್ವಾಹಣೆಯ ವೆಚ್ಚದ ಮಾಹಿತಿಯನ್ನು ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡಿದ್ದೇನೆ. ದಿಃ 01-07-2013 ರಂದು ಇ.ಓ. ದಾವಣಗೆರೆ ಇವರು ಆರೋಪಿಯ ಸೇವಾ ಮಾಹಿತಿ ಮತ್ತು ಆಸ್ತಿ ಮತ್ತು ದಾಯಿತ್ವದ ಬಗ್ಗೆ ಮಾಹಿತಿಯನ್ನು ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡಿದ್ದೇನೆ. ದಿಃ 09-08-2013 ರಂದು ಉಪ ನೊಂದಣಾಧಿಕಾರಿ ಜಗಳೂರು ಇವರು ಆರೋಪಿಯು ವೈ.ಆರ್. ಬಾಬುರೆಡ್ಡಿ ಇವರಿಗೆ ಮಾರಾಟ ಮಾಡಿದ ನಿವೇಶನದ ಮಾಹಿತಿ ನೀಡಿದ್ದು, ಕಡತಕ್ಕೆ ಅಳವಡಿಸಿಕೊಂಡಿದ್ದೇನೆ. ದಿಃ 13-08-2013 ರಂದು ಇಮಾಮ್ ಮೆಮೊರಿಯಲ್ ಸ್ಕೂಲ್ ಜಗಳೂರು ಇವರು ಆರೋಪಿಯ ಮಗ ದರ್ಶನ 5 ರಿಂದ 10 ನೇ ತರಗತಿಯವರೆಗೆ ವಿದ್ಯಾಭ್ಯಾಸ ವೆಚ್ಚದ ಮಾಹಿತಿಯನ್ನು ನೀಡಿದ್ದು, ಕಡತಕ್ಕೆ ಅಳವಡಿಸಿಕೊಂಡಿದ್ದೇನೆ. ನಾಳಂದ ಪದವಿ ಪೂರ್ವ ಕಾಲೇಜು ಜಗಳೂರು ಇವರು ಚೇತನ ಪ್ರಥಮ ಮತ್ತು ದ್ವಿತಿಯ ಪಿಯುಸಿಯ ವಿದ್ಯಾಭ್ಯಾಸ ವೆಚ್ಚದ ಮಾಹಿತಿಯನ್ನು ನೀಡಿದ್ದು, ಕಡತಕ್ಕೆ ಅಳವಡಿಸಿಕೊಂಡಿದ್ದೇನೆ. ದಿಃ 14-

08-2013 ರಂದು ಜಿ. ಎಂ. ಹಾಲಮ್ಮ ಪದವಿ ಪೂರ್ವ ಕಾಲೇಜು ಜಗಳೂರು ಮಗ ದರ್ಶನ ಪ್ರಥಮ ಮತ್ತು ದ್ವಿತಿಯ ಪಿಯುಸಿಯ ವಿದ್ಯಾಭ್ಯಾಸ ವೆಚ್ಚದ ಮಾಹಿತಿಯನ್ನು ನೀಡಿದ್ದು, ಕಡತಕ್ಕೆ ಅಳವಡಿಸಿಕೊಂಡಿದ್ದೇನೆ. ದಿಃ 20-09-2013 ರಂದು ಎಸ್.ಬಿ.ಎಂ. ಜಗಳೂರು ಇವರು ಆರೋಪಿಯ ಪತ್ನಿ ಎಸ್.ವಿ. ಖಾತೆ ಮತ್ತು ಸಾಲದ ವಿವರವನ್ನು ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡಿದ್ದೇನೆ. ದಿಃ 03-10-2013 ರಂದು ನನಗೆ ವರ್ಗಾವಣೆಯಾಗಿರುವುದರಿಂದ ಮುಂದಿನ ತನಿಖೆಗಾಗಿ ಕಡತವನ್ನು ಎಸ್.ಟಿ. ಒಡೆಯರ್ ರವರಿಗೆ ಕೊಟ್ಟಿದ್ದೇನೆ.

**ಪಾಟೀ ಸವಾಲುಃ ವಕೀಲರಿಂದ ಆರೋಪಿತರ ಪರವಾಗಿ**:

ಆರೋಪಿ ಪರ ವಕೀಲರು ಸಮಯ ಕೋರಿರುವುದರಿಂದ ಪಾಟೀ ಸವಾಲನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದಾವಣಗೆರೆ.